ಈಗಲಾದರೂ ಹಣಕಾಸಿನ ಮುಗ್ಗಟ್ಟು ಕಡಿಮೆಯಾಗಿದೆಯೇ ? ಗಜೇಂದ್ರಗಡ ಕೈಮಗ್ಗ ಅಭಿವೃದ್ಧಿ ನಿಗಮದ ಶಾಖೆಯವರು ನಿವೇಶನಕ್ಕಾಗಿ ಮನವಿ ಸಲ್ಲಿಸಿ ಎಷ್ಟು ವರ್ಷವಾಯಿತು ? ನಿವೇಶನದ ಬಗ್ಗೆ ಯಾವ ತುರ್ತು ಕ್ರಮ ಕೈಗೊಂಡಿದ್ದೀರಿ ? ರಾಜ್ಯ ಸರ್ಕಾರ, ಭಾರತ ಸರ್ಕಾರ ಮತ್ತು ಡಚ್ ಸರ್ಕಾರಗಳು ಪರಿಶೀಲನೆ ಮಾಡಿ ನಿರ್ಣಯ ಕೈಗೊಳ್ಳುತ್ತೇವೆಂದು ಹೇಳಿರುತ್ತೀರಿ. ಇದು ಎಷ್ಟು ವರ್ಷ ನಡೆಯುತ್ತದೆ, ಈಗ ಯಾವ ಹಂತಕ್ಕೆ ಬಂದಿದೆ ಎಂಬುದನ್ನು ಹೇಳಬೇಕು.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಕೈಮಗ್ಗ ನಿಗಮಕ್ಕೆ ೧೦ ಕೋಟಿ ರೂಪಾಯಿಗಳ ಕನ್‌ಸಾರ್ಟಿಯಮ್ ಮಾಡಿದ್ದು, ಈಗಾಗಲೇ ಒಂದು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಒಟ್ಟು ೧೫ ಕೋಟಿ ರೂಪಾಯಿಗಳ ಹಣದ ವ್ಯವಸ್ಥೆ ಆದರೆ ಆರ್ಥಿಕ ಸುಧಾರಣೆ ಆಗುತ್ತದೆ. ಎತ್ತು ಕೈಮಗ್ಗಗಳಿಗೆ ಬೇಕಾದ ನಿವೇಶನವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಹತ್ತಿ ಬೆಳೆ ಸ್ವಲ್ಪ ಕಡಿಮೆ ಆದುದರಿಂದ ಮತ್ತು ವಿದೇಶಗಳಿಗೆ ನೂಲನ್ನು ರಫ್ತು ಮಾಡುವುದರಿಂದ, ಸಕಾಲದಲ್ಲಿ ನೂಲನ್ನು ಒದಗಿಸುವುದಕ್ಕೆ ತೊಂದರೆಯಾದುದರಿಂದ ಈ ಸಮಸ್ಯೆ ಉದ್ಭವವಾಗಿದೆ. ಡಚ್ ಸ್ಕೀಮ್‌ನಲ್ಲಿ ೧೯೪೨ ವರ್ಕ್ ಕಂ ಲಿವಿಂಗ್ ಷೆಡ್ಡುಗಳನ್ನು ಕಟ್ಟುತ್ತಿದ್ದು, ಇವುಗಳಲ್ಲಿ ೧೯೧೮ ವರ್ಕ್ ಷೆಡ್ಡುಗಳನ್ನು ಪೂರ್ಣ ಮಾಡಿ ಫಲಾನುಭವಿಗಳಿಗೆ ಕೊಟ್ಟಿದ್ದೇವೆ. ನಾವು ಡಚ್ ಸರ್ಕಾರದ ನೆರವಿಗಾಗಿ ಹೋಗಬೇಕಾಗಿದೆ. ಇದರ ಬಗ್ಗೆ ಈಗಾಗಲೇ ೨ನೇ ಸ್ಕೀಮ್ ಪ್ರಿಪೇರ್ ಮಾಡಿ ಇಂಡಿಯಾ ಸರ್ಕಾರಕ್ಕೆ ಕಳುಹಿಸಿದ್ದೇವೆ. ಗಜೇಂದ್ರಗಡದಲ್ಲಿ ಒಟ್ಟು ೧೨೭೦ ಕೈಮಗ್ಗಗಳಿವೆ. ೩೫೪ ಕೈಮಗ್ಗಗಳು ಈ ನಿಗಮದ ವ್ಯಾಪ್ತಿಯಲ್ಲಿ ಬರುತ್ತವೆ. ಗಜೇಂದ್ರಗಡದಲ್ಲೂ ಕೂಡ ಕೈಮಗ್ಗದ ನೇಕಾರರಿಗೆ ಒಂದುನೂರು ವಸತಿಗಳನ್ನು ಕಟ್ಟಿಸಿ ಕೊಡುವುದಕ್ಕೆ ಎರಡನೇ ಡಚ್ ಯೋಜನೆಯಲ್ಲಿ ಒಂದು ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದೇವೆ.

ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಗದಗ್ ವರ್ತುಲಕ್ಕೆ ಸೇರಿದ ಗಜೇಂದ್ರಗಡ ಕೈಮಗ್ಗ ಅಭಿವೃದ್ಧಿ ನಿಗಮ ಶಾಖೆಯ ನೌಕರರ ಬಗ್ಗೆ ದೂರು ಬಂದಿದೆ ಎಂದು ಹೇಳಿದ್ದಾರೆ. ಇದು ಬಂದು ಎಷ್ಟು ವರ್ಷ ಆಯಿತು? ಇನ್ನೂ ಪರಿಶೀಲನೆ ಮಾಡುತ್ತೇವೆ, ಮಾಡುತ್ತೇವೆ ಎಂದರೆ, ಯಾವ ರೀತಿ ಆಗುತ್ತದೆ ಎಂದರೆ, ಮನೆಯೊಳಗೆ ಕೊಳೆತ ಹೆಣ ಇಟ್ಟುಕೊಂಡು, ಆದನ್ನು ಆಚೆಗೆ ಒಗೆಯಲು ಪರಿಶೀಲನೆ ಮಾಡುತ್ತೇವೆ ಎನ್ನುವ ಹಾಗೆ ಆಗುತ್ತದೆ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಎರಡು ಮೂರು ವರ್ಷದಿಂದ ನೌಕರರ ಬಗ್ಗೆ ದೂರು ಇದೆ. ಇನ್ನೂ ಪರಿಶೀಲನೆ ಮಾಡುತ್ತೇವೆ ಎಂದರೆ ಮನೆಯೊಳಗೆ ಇರುವ ಹೆಣ ಕೊಳೆತು ನಾರಿದ ಮೇಲೆ ಯಾವ ಪರಿಸ್ಥಿತಿ ಆಗುತ್ತದೆ, ಆ ರೀತಿ ಆಗುತ್ತದೆ. ಇದರ ಬಗ್ಗೆ ನೋಡಿ.

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೇ, ಅಲ್ಲಿನ ಯೋಜನಾ ನಿರೀಕ್ಷಕರ ಮೇಲೆ ಅಪಾದನೆಯನ್ನು ಕೈಮಗ್ಗದ ನೇಕಾರರು ಮಾಡಿದರು. ನಾವು ಈ ಒಂದು ನಿಗಮದ ಮುಖಾಂತರ ಏನು ಕೈಮಗ್ಗದ ಒಟ್ಟಿಯನ್ನು ಉತ್ಪಾದನೆ ಮಾಡುತ್ತೇವೆ, ಅದರ ಗುಣಮಟ್ಟ ಚೆನ್ನಾಗಿರಬೇಕು, ಕಳಪೆ ಗುಣಮಟ್ಟ ಇದ್ದರೆ ತೊಂದರೆಯಾಗುತ್ತದೆ. ಹಾಗೂ ನಿಗದಿ ಪಡಿಸಿದ ವೇಳೆಯೊಳಗೆ ನಾವು ಬಟ್ಟೆಯನ್ನು ಮತ್ತು ನೂಲನ್ನು ಕೊಡಬೇಕೆಂದು ಹೇಳಿದ ಸಂದರ್ಭದಲ್ಲಿ ಅಲ್ಲಿನ ನೇಕಾರರು ವಿಳಂಬ ಮಾಡಿದ ಸಂದರ್ಭ ಕೂಡಾ ಉಂಟು. ನನಗೆ ಬಂದಿರುವ ಮಾಹಿತಿಯ ಪ್ರಕಾರ ಅಲ್ಲಿನ ಕೈಮಗ್ಗದವರು ಅಲ್ಲಿನ ಅಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದ್ದಾರೆ, ಇದರ ಬಗ್ಗೆ ಪೋಲೀಸರವರೆಗೂ ದೂರು ಹೋಯಿತು. ಅಲ್ಲಿನ ಪುರಸಭಾಧ್ಯಕ್ಷರು ಹಾಗೂ ಇತರರು ಸೇರಿಕೊಂಡು ಇದನ್ನು ತೀರ್ಮಾನ ಮಾಡಿ ಮುಂದೆ ಇಂತಹ ಒಂದು ಜಗಳ ಬಾರದ ರೀತಿಯಲ್ಲಿ ಮಾಡಿದ್ದಾರೆ. ಅವರು ಅಪಾದನೆ ಮಾಡಿದ್ದ ಯೋಜನಾ ನಿರೀಕ್ಷಕರನ್ನು ಅಲ್ಲಿಂದ ವರ್ಗಾವಣೆ ಮಾಡಿರುತ್ತೇವೆ. ಬೇರೆಯವರನ್ನು ಹಾಕಿದ್ದೇವೆ. ಅವರನ್ನೂ ಸಹ ವರ್ಗಾವಣೆ ಮಾಡಬೇಕೆಂದೂ, ಅಲ್ಲಿನ ಎಲ್ಲಾ ಸಿಬ್ಬಂದಿವರ್ಗದವರನ್ನೂ ವರ್ಗಾವಣೆ ಮಾಡಬೇಕೆಂದು ಹೇಳುತ್ತಿದ್ದಾರೆ. ಎಲ್ಲರನ್ನೂ ವರ್ಗ ಮಾಡಿಕೊಂಡು ಕುಳಿತರೆ ಸರಕಾರ ನಡೆಸುವುದು ಕಷ್ಟವಾಗುತ್ತದೆ. ಯಾರು ತಪ್ಪಿತಸ್ಥರಿದ್ದಾರೆ ಅವರನ್ನು ವರ್ಗ ಮಾಡುತ್ತೇವೆ.

ವರಾಹಿ ಜಲ ವಿದ್ಯುತ್ ಯೋಜನೆ

೭೭ (೨೦೫) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಭಾರಿ, ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್‌ಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ವರಾಹಿ ಜಲವಿದ್ಯುತ್ ಯೋಜನೆಯನ್ನು ಸಂಪೂರ್ಣಗೊಳಿಸಲು ಪ್ರಾರಂಭದಲ್ಲಿ ಸಿದ್ಧ ಪಡಿಸಿದ್ದ ಅಂದಾಜಿನ ಮೊತ್ತವೆಷ್ಟು?

ಅ) ಈ ಬಗ್ಗೆ ಈವರೆಗೆ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು?

ಇ) ಈ ಯೋಜನೆ ಪೂರ್ಣಗೊಳ್ಳಲು ಇನ್ನು ಎಷ್ಟು ವರ್ಷಗಳು ಹಾಗೂ ಹಣ ಬೇಕಾಗಬಹುದು?

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು).—

ಅ) ವರಾಹಿ ಜಲವಿದ್ಯುತ್ ಯೋಜನೆಯನ್ನು ಸಂಪೂರ್ಣಗೊಳಿಸಲು ೧೯೭೭–೭೮ರಲ್ಲಿ ಅನುಮೋದಿತವಾದ ಅಂದಾಜಿನ ಮೊತ್ತ ೧೫೬.೪೦ ಕೋಟಿ ರೂಪಾಯಿಗಳು ಈಗ ಪರಿಷ್ಕರಿಸಿರುವ ಮೊತ್ತ ೨೦೦ ಕೋಟಿ ರೂಪಾಯಿಗಳು.

ಆ) ಈ ಬಗ್ಗೆ ಇವರೆಗೆ (ಜುಲೈ ೧೯೮೭) ಖರ್ಚು ಮಾಡಿರುವ ಹಣದ ಮೊತ್ತ ೧೫೮.೮೧ ಕೋಟಿ ರೂಪಾಯಿಗಳು.

ಇ) ಈ ಯೋಜನೆ ೧೯೮೮–೮೯ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇನ್ನೂ ೪೧.೧೯ ಕೋಟಿ ರೂಪಾಯಿಗಳು ಬೇಕಾಗಿದೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಈ ವಾರಾಹಿ ಜಲವಿದ್ಯುತ್ ಯೋಜನೆಯ ಪ್ರಥಮ ಸ್ಟೇಜ್ ಯಾವಾಗ ಉದ್ಘಾಟನೆಯಾಗಬಹುದು?

ಶ್ರೀ ಜೆ.ಹೆಚ್. ಪಟೇಲ್,—೧೯೮೮ರಲ್ಲಿ ಇದರ ಮೊದಲನೇ ಹಂತದ ವಿದ್ಯುತ್ ಉತ್ಪಾದನೆ ಪ್ರಾರಂಭವಾಗುತ್ತದೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಈಗಾಗಲೇ ೧೫೮.೮೧ ಕೋಟಿ ಖರ್ಚು ಮಾಡಿದ್ದಾರೆ. ಇನ್ನೂ ೪೧.೧೯ ಕೋಟಿ ಖರ್ಚು ಮಾಡಬೇಕಾಗಿದೆ. ಈ ಯೋಜನಾ ಸ್ಥಳಕ್ಕೆ ತಾವು ಎಂದಾದರೂ ಸಂದರ್ಶನ ಕೊಟ್ಟಿದ್ದೀರಾ?

ಶ್ರೀ ಜೆ.ಹೆಚ್. ಪಟೇಲ್.—ಎರಡು ಸಾರಿ ಹೋಗಿದ್ದೇನೆ. ಕಾರಣಾಂತರದಿಂದ ಪ್ರಾರಂಭದಲ್ಲೇ ಡಿಲೇ ಆಯಿತು. ಯೋಜನಾ ವೆಚ್ಚ ಜಾಸ್ತಿಯಾಯಿತು. ಒಂದೆರಡು ವರ್ಷ ತಡವಾದರೂ ಯೋಜನಾ ವೆಚ್ಚ ಜಾಸ್ತಿಯಾಗುತ್ತದೆ. ಮೊದಲಿನ ಎಸ್ಟಿಮೇಟೆಡ್ ಕಾಸ್ಟ್ ೧೫೬ ಕೋಟಿ ಇದ್ದುದು ಈಗಾಗಲೇ ಅದು ೧೫೮ ಕೋಟಿ ಖರ್ಚು ಮಾಡಿದ್ದೇವೆ. ಇನ್ನೂ ೪೧ ಕೋಟಿ ಖರ್ಚುಮಾಡಬೇಕಾಗಿದೆ.

ಶ್ರೀ ಸಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಸಪ್ಲಿಮೆಂಟರಿಗೆ ಅವಕಾಶ ಇಲ್ಲ. ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ನೀವು ಕುಳಿತುಕೊಳ್ಳಿ.

ಶ್ರೀ ಸಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ಎರಡನೇ ಸಲ ಪರಿಷ್ಕರಿಸಿದಾಗ ಸುಮಾರು ೬೫ ಕೋಟಿ ರೂಪಾಯಿ ಯೋಜನಾ ವೆಚ್ಚ ಜಾಸ್ತಿಯಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ೬೫ ಕೋಟಿ ರೂಪಾಯಿಗಳು ಯಾವುದಕ್ಕೆಲ್ಲಾ ಜಾಸ್ತಿ ಆಗಿದೆ, ಯಾವ ಕಾರಣಕ್ಕಾಗಿ ಜಾಸ್ತಿಯಾಗಿದೆ. ಎರಡುಮೂರು ವರ್ಷದಲ್ಲೇ ೬೫ ಕೋಟಿ ರೂಪಾಯಿ ಜಾಸ್ತಿಯಾಗಲು ಕಾರಣಗಳೇನು?

ಶ್ರೀ ಜೆ. ಹೆಚ್. ಪಟೇಲ್.—ಇದು ಎರಡು ಮೂರು ವರ್ಷದಲ್ಲಿ ಜಾಸ್ತಿಯಾಗಿರುವುದಲ್ಲ. ೧೯೭೭ರಲ್ಲಿ ಎಸ್ಟಿಮೇಟ್ ಸ್ಯಾಂಕ್ಷನ್ ಆಯಿತು. ೧೯೭೮ರಲ್ಲಿ ಕೆಲಸ ಪ್ರಾರಂಭವಾಯಿತು. ಈಗ ನಾವು ೧೯೮೭ರ ಜುಲೈ ಹೊತ್ತಿಗೆ ೧೫೮ ಕೋಟಿ ಖರ್ಚು ಮಾಡಿದ್ದೇವೆ. ಕಾಸ್ಟ್ ಎಸ್ಕಲೇಷನ್ ಆಗಿರುವುದರ ವಿವರ ವಿಲ್ಲಾ ಬೇಕಾದರೆ ಕೊಡುತ್ತೇನೆ. ವಾರಾಹಿ ಯೋಜನೆ ಇಂಪ್ಲಿಮೆಂಟೇಷನ್‌ನಲ್ಲಿ ಕಾಸ್ಟ್ ಎಸ್ಕಲೇಷನ್ ಆಗಿರುವುದರ ಬಗ್ಗೆ ವಿವರ ಕೊಡುತ್ತೇನೆ. ದಿನದಿನಕ್ಕೆ ವೆಚ್ಚ ಜಾಸ್ತಿಯಾಗುತ್ತಿದೆ. ಯಾವುದೇ ಯೋಜನೆ ನಿಗದಿತ ಸಮಯದಲ್ಲಿ ಮುಗಿದರೆ ಮಾತ್ರ ಅಂದಾಜು ವೆಚ್ಚ ಜಾಸ್ತಿ ಆಗುವುದಿಲ್ಲ. ಇಲ್ಲದೇ ಹೋದರೆ ಜಾಸ್ತಿಯಾಗಿಯೇ ಆಗುತ್ತದೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಆ ಯೋಜನೆಯಿಂದ ಆಗುವ ವಿದ್ಯುಚ್ಛಕ್ತಿ ಉತ್ಪಾದನೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್.—೨೫೦ ಮೆಗಾವಾಟ್ಸ್.